ಸಾಲುಸಾಲಾಗಿ ನಿಂತಿರುವುದು ಕಂಡು ಬಂದಿತ್ತು. ಉದ್ದದ ಗಾಜಿನ ಕಿಟಕಿಯೊಳಗಿಂದ ಆ ಮಕ್ಕಳ ಉಪದ್ರವ ಎದ್ದು ಕಾಣುತ್ತಿತ್ತು.

ಏರ್‌ಕಾರ್ಟ್‌ನಿಂದ ಇಳಿದು ಅನಘಾಳನ್ನು ಕೂಡಿಕೊಂಡಾಗ ಅವಳು ಒಂದೇ ಉಸಿರಿನಲ್ಲಿ ಅರುಹಿದ್ದಳು. 'ಒಳಗಿರುವ ಮಕ್ಕಳು ದಾಂಧಲೆ ಎಬ್ಬಿಸಿದ್ದಾರೆ. ಇನ್ನು ಕೆಲವು ನಿಮಿಷ ಕಾದರೆ ಅವರು ಕಿಟಕಿ ಗಾಜುಗಳನ್ನು ಹೊಡೆದುಹಾಕಬಹುದು.'

'ನಾವು ಆ ಏರ್‌ಬಸ್ ಒಳ ಹೋಗಿ ಅವರನ್ನು ಸಮಾಧಾನಪಡಿಸಬೇಕಿದೆಯೇನೋ... ನೀನು ಒಂದು ಕೇಬಲ್ ಕಡೆ ನೋಡು. ನಾನು ಇನ್ನೊಂದನ್ನು ನಿಭಾಯಿಸುತ್ತೇನೆ...' ಎಂದು ಹನ್ನಾ ಕೂಡಲೇ ಕಾರ್ಯೋನ್ಮುಖಳಾದಳು.

ಏರ್‌ಬಸ್ ಒಂದರ ಪ್ರವೇಶ ದ್ವಾರವು ಅವಳ ಆದೇಶದಂತೆ ತೆರೆದುಕೊಂಡಾಗ ಅವಳ ಹಿಂದೆ ಮೂರ್ನಾಲ್ಕು ರೊಬೋ ಕಾಪ್‌ಗಳೂ ಅವಳೊಂದಿಗೆ ಒಳಪ್ರವೇಶಿಸಿದ್ದವು.

'ನಾನು ಹನ್ನಾ. ಸಂಚಾರ ವಾರ್ಡನ್. ಶಾಲೆಗೆ ಕಳುಹಿಸದೆ ಇಲ್ಲಿ ನಿಮ್ಮನ್ನಿರಿಸಲು ಕಾರಣವಿದೆ. ಕೆಳಗೆ ಮೆರವಣಿಗೆ ಇನ್ನೂ ಸಾಗುತ್ತಿರುವುದರಿಂದ, ನಿಮ್ಮನ್ನು ಇಲ್ಲಿ ಕೆಳಗಿಳಿಸಲು ಸಾಧ್ಯವಾಗದು. ನೀವುಗಳು ಕೊಂಚ ಕಾಯಬೇಕಾಗುತ್ತದೆ', ಎಂದು ದೃಢ ವಾಣಿಯಲ್ಲಿ ತನ್ನ ಮೌತ್ ಸ್ಪೀಕರ್‌ನಲ್ಲಿ ಮಾತನಾಡಿದಾಗ ಆ ಮಕ್ಕಳು ದಿಙ್ಮೂಢರಾಗಿ ಮಿಕಮಿಕ ಅವಳನ್ನೇ ನೋಡಿದವು.

'ನಿಮ್ಮ ಶಾಲೆಗಳ ಪಟ್ಟಿಯನ್ನು ನನಗೆ ನೀಡಿ. ನಾನು ನಿಮ್ಮ ಶಾಲಾ ಮುಖ್ಯಸ್ಥರೊಂದಿಗೆ ಮಾತನಾಡಿ ಪರಿಸ್ಥಿತಿ ವಿವರಿಸುತ್ತೇನೆ' ಎಂದವಳೇ ಅವರು ಹೇಳುತ್ತಾ ಹೋದ ಶಾಲೆಗಳಿಗೆ ಒಂದೊಂದಾಗಿ ವಾಕಿಯಲ್ಲಿ ಸಂಪರ್ಕ ಸಾಧಿಸಿದ್ದಳು. ಆಗಲೇ ಪಾದಯಾತ್ರೆಯ ವಿಚಾರ ಎಲ್ಲಾ ವಾಹಿನಿಗಳಲ್ಲಿ ಸುದ್ದಿಯಾಗಿ, ಶಾಲಾ ಮುಖ್ಯಸ್ಥರು ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಶಾಲಾ ಮಕ್ಕಳು ತಡವಾಗಿ ಬರಬಹುದೆಂಬ ಮಾಹಿತಿಗೆ ತಮ್ಮ ಅಭ್ಯಂತರವಿಲ್ಲವೆಂದು ಹಸಿರುನಿಶಾನೆ ತೋರಿಸಿದ್ದರು.

ತಮ್ಮ ಎದುರಿಗೇ ನಡೆದ ಪಾರದರ್ಶಕ ಮಾತುಕತೆಯು ಆ ಶಾಲಾಮಕ್ಕಳ ಮೇಲೆ ಅವಶ್ಯಕ ಪರಿಣಾಮ ಬೀರಿತ್ತು. ಗದ್ದಲದ ಗೂಡಾದ ಏರ್‌ಬಸ್ ಈಗ ತಟಸ್ಥವಾಗಿತ್ತು.

ಮಾತುಕತೆಯ ಬಳಿಕ ನಿರ್ಗಮನ ದ್ವಾರದ ಬಳಿಯಿದ್ದ 'ಔಟ್‌ಲೆಟ್'ನಿಂದ ಮಕ್ಕಳಿಗಾಗಿ ಅವರ ಇಷ್ಟದ ಕ್ಯಾಂಡಿ ಖರೀದಿಸಿ ತರಲು ಏರ್ ಪೋರ್ಟರ್‌ರವರಿಗೆ ಸೂಚನೆ ನೀಡಿದಾಗ ಅವರು ಒಂದು ಕಂಟೇನರ್ ಅನ್ನೇ ಹೊತ್ತು ತಂದಿದ್ದರು!

***

ಹನ್ನಾ ಹಾಗೂ ಅನಘಾ ಆ ಮಕ್ಕಳು ಸುರಕ್ಷಿತವಾಗಿ ಕೆಳಗಿಳಿದು ತಮ್ಮ ತಮ್ಮ ಶಾಲೆಗಳಿಗೆ ತಲುಪುವವರೆಗೂ ಪರಿಸ್ಥಿತಿ ನಿಯಂತ್ರಣದಲ್ಲಿರಿಸಿಕೊಂಡು, ನಂತರ ಪಾದಯಾತ್ರೆ ತನ್ನ ಗಮ್ಯ ಸ್ಥಾನ ತಲುಪಿದ ಬಳಿಕ ತಮ್ಮ ಕರ್ತವ್ಯ ಮುಗಿಯಿತೆಂಬ ಸಮಾಧಾನದಿಂದ ತಂತಮ್ಮ ದಾರಿಹಿಡಿದಿದ್ದರು.

ಹನ್ನಾ ನೇರವಾಗಿ ಹೊರಟಿದ್ದು ಸಂಚಾರ ನಿಯಂತ್ರಣ ಕೇಂದ್ರದ ಕಡೆಗೆ. ಹೆಚ್ಚುವರಿಯಾಗಿ ಕರ್ತವ್ಯಕ್ಕೆ ನಿಯೋಜಿಸಿದ ರೊಬೋ ಕಾಪ್‌ಗಳನ್ನು ನಿಯಂತ್ರಣ ಕೇಂದ್ರಕ್ಕೆ ವಾಪಸ್ ಹಿಂದಿರುಗಿಸಿ ವಾರ್ಡನ್‌ಗಳಿಗಾಗಿ ಮೀಸಲಿಟ್ಟ ಕೊಠಡಿಯಲ್ಲಿ ಕೂತು ತನ್ನ ತಿಂಗಳ ಕರ್ತವ್ಯದ ಚಾರ್ಟ್ ಪರಿಶೀಲಿಸಿದಳು. ಅವಳಿಗಾಗಿ ತಿಂಗಳಲ್ಲಿ ಒಂದೆರಡು ದಿನ ಮೀಸಲಿಟ್ಟ ಈ 'ಮೀ ಟೈಮ್' ಅನ್ನುವುದು ಸುಯೋಗವೇ ಆಗಿತ್ತು. ಕೆಲಸದ ಜಂಜಾಟದಲ್ಲಿ ತನ್ನ ಪ್ಲೇ ಬ್ಯಾಕ್ ಸಿಸ್ಟಮ್‌ನ್ನು ಪರಿಶೀಲಿಸಿ ಸರಿ ತಪ್ಪುಗಳ ತುಲನೆ ಮಾಡದಿದ್ದರೆ ನಾವಿಕನಿಲ್ಲದ ದೋಣಿಯಂತಾಗುತ್ತಿತ್ತೇನೋ.

'ಕಂಪ್ಯೂಜೆಕ್ಟರ್' ಉಪಕರಣ ಬಿಂಬಿಸಿದ ಸ್ಕ್ರೀನ್ ಮೇಲಿನ ಅಂಕಿ ಅಂಶವನ್ನೂ ತನ್ನ ಕರ್ತವ್ಯದ ಸ್ವರೂಪ, ಏರಿಳಿತಗಳನ್ನೂ ವೀಕ್ಷಿಸುವಾಗ ಅವಳಿಗನಿಸಿತು... 'ತಾನು ತನ್ನ ತಿಂಗಳ ಟಾರ್ಗೆಟ್‌ನ್ನು ನಿರ್ದಿಷ್ಟಪಡಿಸಿದ ಮೂರ್ನಾಲ್ಕು ದಿನಗಳ ಹಿಂದೆಯೇ ತಲುಪಿದ್ದಾಯ್ತೆಂದು.'

ಕೆಲವೊಂದು ದಿನಗಳಂದು ಹೆಚ್ಚುವರಿ ಕೆಲಸವಿದ್ದುದರಿಂದ ಅವಳಿಗೆ ಅಧಿಕ ಬೋನಸ್ ಅಂಕಗಳು ದೊರಕಿದ್ದವು. ಅವಳ ಖಾತೆಯ ಮಡಿಲಿಗೆ ಬಿದ್ದ ಈ ಬೋನಸ್ ಅಂಕಗಳಿಂದಾಗಿ ಇಬ್ಬರು ವ್ಯಕ್ತಿಗಳಿಗಾಗುವಂತೆ 'ವಾಕ್ ಥ್ರೂ ಮಲ್ಟಿ ಡೈಮೆನ್‌ಷನ್' ಚಿತ್ರ ಪ್ರದರ್ಶನ ವೀಕ್ಷಿಸಲು ಎರಡು ಪಾಸ್‌ಗಳು ಲಭಿಸಿದ್ದವು.

ಸಂಚಾರ ಯೋಜನೆಯಡಿಯಲ್ಲಿ ಸಂಚಾರ ವಾರ್ಡನ್ ಕುಟುಂಬಸ್ಥರ ಒತ್ತಡ ನಿವಾರಣೆಗೆ ಈ ಕೆಲವು ರಿಲ್ಯಾಕ್ಸೇಷನ್ ತಂತ್ರಗಳಿದ್ದು, ಅದರಿಂದ ಅವರ ಒತ್ತಡದ ಕೆಲಸವಿದ್ದರೂ ಸಹ್ಯವಾಗಿಸಿತ್ತು.

ತನ್ನ ಕರ್ತವ್ಯದ ಚಾರ್ಟ್ ಪರಿಶೀಲಿಸಿ ಮುಂದಿನ ಟಾರ್ಗೆಟ್ ಹಾಗೂ ಯೋಜನೆಗಳನ್ನು 'ಕಂಪ್ಯೂಜೆಕ್ಟರ್' ಸ್ಕ್ರೀನ್‌ನಲ್ಲಿ ನಮೂದಿಸಿ ನಿಯಂತ್ರಣ ಕೊಠಡಿಯತ್ತ ಹೆಜ್ಜೆ ಹಾಕಿದಳು. ಸಂಚಾರ ನಿಯಂತ್ರಣ ಕೇಂದ್ರಕ್ಕೆ ನಿಯೋಜಿಸಲಾದ ಮುಖ್ಯಸ್ಥ ಅವಳನ್ನು ನೋಡಿದೊಡನೆಯೇ ತನ್ನ ಪಾರದರ್ಶಕ ಕ್ಯಾಬಿನ್‌ನಿಂದ ಹೊರ ಬಂದು ಶುಭಾಶಯ ಕೋರಿ ಅವಳ ಕೈ ಕುಲುಕಿದ್ದ. ಪರಸ್ಪರ ವಾರದಲ್ಲಿ ಒಮ್ಮೆಯಾದರೂ ಸಂಪರ್ಕದಲ್ಲಿದ್ದರಿಂದ ಯಾವುದೇ ಪ್ರಮುಖವೆಂದೆನಿಸಿದ ವಿಷಯವಿದ್ದರೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಇಂದೂ ಅಷ್ಟೇ. ಬೃಹತ್ ಪರದೆಯನ್ನು ಮೂರು ಭಾಗಗಳನ್ನಾಗಿ ಬೇರ್ಪಡಿಸಿದ್ದು, ಒಂದು ವಾಯು, ರಸ್ತೆ ಹಾಗೂ ಇಂಟ್ರಾಸಿಟಿ ಬುಲೆಟ್ ಮೆಟ್ರೋ ಸಂಚಾರ ವ್ಯವಸ್ಥೆಯ ಕಣ್ಗಾವಲು ಕ್ಯಾಮರಾ ಚಿತ್ರಗಳನ್ನು 'ಥ್ರೀ ಡೀ' ವ್ಯವಸ್ಥೆಯಲ್ಲಿ ಬಿಂಬಿಸಲಾಗುತ್ತಿದ್ದವು. ಅದನ್ನು ಶಿಫ್ಟ್ ವ್ಯವಸ್ಥೆಯಲ್ಲಿ ವೀಕ್ಷಿಸಲು ಹಲವಾರು ಸಂಚಾರ ಪೊಲೀಸರನ್ನು ನಿಯೋಜಿಸಲಾಗಿತ್ತು. ಒಂದು ಬೃಹತ್ ಥಿಯೇಟರ್ ಒಳಗೆ ಕಾಲಿರಿಸಿದಂತಹ ಅನುಭವ ನೀಡಿದ ಆ ನಿಯಂತ್ರಣ ಕೇಂದ್ರದ ಮೂರು ವಾಲ್ ಸ್ಕ್ರೀನ್‌ಗಳು ಒಂದೊಂದೂ ಬೇರೆ ದಿಕ್ಕಿನಲ್ಲಿದ್ದೂ ಅವುಗಳ ಪರಿಶೀಲನೆಗೆ ನಿಯೋಜಿಸಲಾದ ಪ್ರತ್ಯೇಕ ಸಿಬ್ಬಂದಿಗಳು ಹನ್ನಾಳ ಆಗಮನವಾದರೂ ಒಂದೆರಡು ಸಲ ಅವಳೆಡೆ ತಿರುಗಿ ನೋಡಿ ಮತ್ತೆ ತಮ್ಮ ಕೆಲಸದಲ್ಲಿ ಕಾರ್ಯತತ್ಪರರಾಗಿದ್ದರು.

'ಹನ್ನಾ ಮ್ಯಾಮ್. ಪಾದಯಾತ್ರೆಯ ಸಂದರ್ಭದಲ್ಲಿ ಆ ಮಕ್ಕಳನ್ನು ನಿಮ್ಮ ಅಂಕೆಯಲ್ಲಿರಿಸಿದ ರೀತಿ ಮೆಚ್ಚುವಂತದ್ದು. ನಮ್ಮ ವಾಯು ಸಂಚಾರ ಸ್ಕ್ರೀನ್‌ನಲ್ಲಿ ಅಲ್ಲಿನ ಆಗುಹೋಗುಗಳನ್ನು ಗಮನಿಸುತ್ತಿದ್ದೆವು.'

'ನನ್ನ ಕರ್ತವ್ಯವನ್ನು ನಾನು ಮಾಡಿದೆನಷ್ಟೇ. ಅಂದಹಾಗೆ ಆ ಪಾದಯಾತ್ರೆಯ ರೂವಾರಿ 'ರೇವಾ'ರವರು ಆಡಳಿತ ವಿಭಾಗಕ್ಕೆ ಮನವಿ ನೀಡಿರಬೇಕಲ್ಲವೇ. ಅದನ್ನು ಆಡಳಿತ ವಿಭಾಗ ಪುರಸ್ಕರಿಸಿತೇ?'

'ಬಹುಶಃ ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದರಿಂದ ಒಂದು ಸುವಾರ್ತೆ ಹೊರಡಬಹುದೆಂದುಕೊಂಡಿರುವೆ. ನಾವು ನೋಡುತ್ತಿರುವಂತೆಯೇ ಎಲ್ಲೆಲ್ಲಿಂದಲೋ ಜನ ಆ ಪಾದಯಾತ್ರೆಯ ಪ್ರಾರಂಭದ ನಿಗದಿತ ತಾಣಕ್ಕೆ ಸಮುದ್ರದಂತೆ ಬಂದು ಸೇರಿಕೊಂಡಿದ್ದರು.'

'ಹಾಗೆ ಸೇರಿಕೊಂಡಿದ್ದರೂ ಒಬ್ಬರ ಹಿಂದೊಬ್ಬರು ಸಾಲುಸಾಲಾಗಿ ಉದ್ದನೆಯ ಸರಪಣಿಯಂತೆ ಪಾದಯಾತ್ರೆ ಹಮ್ಮಿಕೊಂಡರಲ್ಲವೇ. ಇವರಿಗೆ ಶಿಸ್ತನ್ನು ಯಾರು ಕಲಿಸಿದರೋ...'

'ಹನ್ನಾ ಮ್ಯಾಮ್. ನೆಸಸಿಟಿ ಈಸ್ ದಿ ಮದರ್ ಆಫ್ ಇನ್ವೆನ್ಷನ್ ಅನ್ನೋ ಹಾಗೆ ಅವರುಗಳಿಗೀಗ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂಬುದು ಮುಖ್ಯವಾಗಿದೆ. ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯ ಮೂಡಿಸುವುದು ಮುಖ್ಯವಲ್ಲವೇ.'

'ಅದೂ ನಿಜಾನೇ. ಆದರೆ ಇವರುಗಳನ್ನು ಒಂದೆಡೆ ಕರೆ ತರುವುದು ಅಷ್ಟು ಸುಲಭವೇ?' ಅವಳ ಅನುಮಾನಕ್ಕೆ ಪುಷ್ಟಿ ನೀಡುವಂತೆ ನಿಯಂತ್ರಣ ಕೇಂದ್ರದ ಮುಖ್ಯಸ್ಥ ವಿವರಿಸಿದ್ದ.

'ಅದಕ್ಕೆ ಭಾರೀ ಸಿದ್ಧತೆನೇ ಕೆಲವು ತಿಂಗಳುಗಳ ಹಿಂದಿನಿಂದ ನಡೆದಿದೆ. ಪ್ರಾರಂಭದಲ್ಲಿ ಸಣ್ಣ ಗುಂಪುಗಳಾಗಿ ಕೂಡಿಕೊಂಡು ತಮ್ಮ ಪ್ರತಿರೋಧವನ್ನು ಘೋಷಣೆಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ನಂತರ ವಿಚಾರಣಾ ಮಂಡಳಿ ಮುಂದೆ ನಡೆದ ಸಂವಾದದ ಬಳಿಕ ಅವರಲ್ಲಿ ಛಲವಿನ್ನೂ ಇಮ್ಮಡಿಗೊಂಡು 'ರೇವಾ'ನ ಕರೆಗೆ ಓಗೊಟ್ಟು ಇಷ್ಟೊಂದು ಮಂದಿ ಜಮಾಯಿಸಿದ್ದಾರೆ.'

'ಅರೆ ಮಾನವರಾಗಿರುವುದರಿಂದ, ಅವರು ಐದು ಕಿ.ಮೀ.ವರೆಗೂ ಹೀಗೆ ಪಾದಯಾತ್ರೆ ಹಮ್ಮಿಕೊಳ್ಳಬಾರದಿತ್ತು. ಅವರ ಆರೋಗ್ಯದಲ್ಲಿ ಏನಾದರೂ ವ್ಯತ್ಯಯವಾಗಿದ್ದರೆ ಅದನ್ನು ನಿಭಾಯಿಸುವವರಾರು?'

**ಸಶೇಷ**